ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/308/ಸುತ್ತೋಲೆ/2018-19/ಸೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:24.11.2021

**ಸುತ್ತೋಲೆ**

**ವಿಷಯ:** 2017ನೇ ಸಾಲಿನಲ್ಲಿ ನೇಮಕಾತಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸಮ ಸಂಖ್ಯೆಯ ಸುತ್ತೋಲೆಗಳು ದಿನಾಂಕ:20.04.2019 ಮತ್ತು ದಿನಾಂಕ:20.08.2020.

*****

ಕಾಲೇಜು ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೂ ಈ ಮೂಲಕ ತಿಳಿಸುವುದೇನೆಂದರೆ, 2017ನೇ ಸಾಲಿನಲ್ಲಿ ನೇಮಕಾತಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಸಂಬಂಧ ನಿಯಮಾನುಸಾರ ದಾಖಲಾತಿಗಳನ್ನು ಪರಿಶೀಲಿಸಿ ಅವರುಗಳ ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಪೂರೈಸಿರುವರೆಂದು ಪರಿಗಣಿಸುವ ಕುರಿತು ಪ್ರಸ್ತಾವನೆಯನ್ನು ಕಳುಹಿಸುವಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿತ್ತು. ಆದರೆ ಪ್ರಸ್ತುತ ಕೆಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಸೇವಾ ಪೂರ್ವ ಅವಧಿ ಘೋಷಣೆ ಸಂಬಂಧ ಪ್ರಾಂಶುಪಾಲರುಗಳು ಹಾಗೂ ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳು ಪ್ರಸ್ತಾವನೆಗಳನ್ನು ಕಳುಹಿಸದಿರುವುದನ್ನು ಗಮನಿಸಲಾಗಿದೆ.

ಆದ್ದರಿಂದ ತಮ್ಮ ಕಾಲೇಜುಗಳಲ್ಲಿ 2017 ರಂದು ನೇಮಕಗೊಂಡ ಸಹಾಯಕ ಪ್ರಾಧ್ಯಾಪಕರುಗಳಲ್ಲಿ ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಪೂರೈಸಿಲ್ಲದಿರುವ ಪ್ರಕರಣಗಳೆಷ್ಟು? ಹಾಗೂ ಅವುಗಳಿಗೆ ಕಾರಣಗಳೇನು? ಎಂಬುದರ ಕುರಿತು ಸೂಕ್ತ ದಾಖಲೆಗಳೊಂದಿಗೆ ದಿನಾಂಕ06.12.2021 ರೊಳಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಮಾಹಿತಿಗಳನ್ನು ಭರ್ತಿಮಾಡಿ ಕೇಂದ್ರ ಕಛೇರಿಗೆ ಮಾಹಿತಿ ಒದಗಿಸಲು ಹಾಗೂ ಸದರಿ ಮಾಹಿತಿಯನ್ನು service2dce@gmail.com ನ ಈ-ಮೇಲ್ ವಿಳಾಸಕ್ಕೆ ಕಳುಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಎಲ್ಲಾ ದಾಖಲೆಗಳು ಕ್ರಮಬದ್ಧವಾಗಿದ್ದು, ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ವಿಳಂಬ ಮಾಡಿದಲ್ಲಿ ಸಂಬಂಧಪಟ್ಟ ಕಾಲೇಜಿನ ಅಧ್ಯಾಪಕರು ಹಾಗೂ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಿ ಅವರುಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

25/11/21

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ:-

1. ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು/ಮಂಗಳೂರು/ಧಾರವಾಡ/ಗುಲ್ಬರ್ಗಾ/ಮೈಸೂರು/ ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು,ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಹೆಚ್ಚಿನ ಪ್ರತಿ.
5. ಕಛೇರಿ ಪ್ರತಿ.

## ಅನುಬಂಧ

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು | ಅಧ್ಯಾಪಕರ ಹೆಸರು | ವಿಷಯ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಘೋಷಿಸ ಬೇಕಾಗಿರುವ ದಿನಾಂಕ | ಸೇವಾಪೂರ್ವ ಅವಧಿ ಘೋಷಿಸದಿರಲು ಕಾರಣ | ಸೇವಾಪೂರ್ವ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಕ್ರಮ ವಹಿಸಲಾಗಿದೆಯೇ | ಈಗಾಗಲೇ ಸೇವಾಪೂರ್ವ ಅವಧಿ ಘೋಷಣೆಯಾಗಿರುವ ಪ್ರಕರಣಗಳೆಷ್ಟು | ಬಾಕಿ ಪ್ರಕರಣಗಳೆಷ್ಟು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ಸೂಚನೆ:

1. ತಮ್ಮ ಕಾಲೇಜಿನಲ್ಲಿ 2017 ರಲ್ಲಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಹಾಯಕ ಪ್ರಾಧ್ಯಾಪಕರುಗಳ ಸೇವಾಪೂರ್ವ ಅವಧಿ ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಿದ್ದಲ್ಲಿ ಶೂನ್ಯ ವರದಿಯನ್ನು ಸಲ್ಲಿಸತಕ್ಕದ್ದು.
2. ತಮ್ಮ ಕಾಲೇಜಿನಲ್ಲಿ ನಿಯೋಜನೆ ಮೇಲಿರುವ ಅಧ್ಯಾಪಕರ ಸೇವಾ ಪೂರ್ವ ಅವಧಿ ಘೋಷಣೆ ಆಗಿಲ್ಲದಿರುವ ಪ್ರಕರಣಗಳನ್ನು ಸಹ ಉಲ್ಲೇಖಿಸತಕ್ಕದ್ದು.

(ಪ್ರಾಂಶುಪಾಲರು)
ಸಹಿ/ದೃಢೀಕರಣದೊಂದಿಗೆ